**<u>1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ಚನ್ನಗಿರಿ</u>**

**<u>ಸಿ.ಸಿ.ನಂಬರ್ 581/2022</u>**

**ಪಿರ್ಯಾದುದಾರರು :** **ವಿರುದ್ಧ** **ಆರೋಪಿ**

ಚನ್ನಗಿರಿ ಪೊಲೀಸ್ ಠಾಣೆ

ಶ್ರೀನಿವಾಸ ಬಿನ್ ಬನಪ್ಪ
ವಯಸ್ಸುಃ 26 ವರ್ಷ,
ವಾಸಃ ದೇವರಹಳ್ಳಿ ಗ್ರಾಮ, ಚನ್ನಗಿರಿ
ತಾ ದಾವಣಗೆರೆ ಜಿಲ್ಲೆ

**<u>-:: ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಹೆಚ್ಚುವರಿ ಆರೋಪಿತನ ಹೇಳಿಕೆ ::-</u>**

ಪ್ರಶ್ನೆ-1) ಈ ಪ್ರಕರಣದಲ್ಲಿ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೇಳಿದ್ದೀರಾ? ತಿಳಿಯಿತೇ?

ಉತ್ತರಃ

ಪ್ರಶ್ನೆಃ 3 ಚಾಸಾ-1 ಮಹಮ್ಮದ್ ಗೌಸ್ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 05-8-2021 ರಂದು ಬೆಳಿಗ್ಗೆ 8.45ರ ಸಮಯಕ್ಕೆ ನನ್ನ ಬಾಬ್ತಾದ ಕೆಎ-20/ಇಎ-1642 ನೇ ಬೈಕಿನಲ್ಲಿ ಬಾರ್ ಬೆಂಡಿಂಗ್ ಕೆಲಸಕ್ಕಾಗಿ ಹಿಂಬದಿ ಸವಾರನಾಗಿ ಸಲೀಂನನ್ನು ಕೂರಿಸಿಕೊಂಡು ಚನ್ನಗಿರಿಯಿಂದ ನಲ್ಲೂರು ಗ್ರಾಮಕ್ಕೆ ಹೋಗುತ್ತಿದ್ದಾಗ ದೋಣಿಹಳ್ಳಿ ಗ್ರಾಮದ ಬಳಿ ಮುದಿಗೆರೆ ಗ್ರಾಮದ ಕಡೆಯಿಂದ ಟ್ರಾಕ್ಟರ್ ಚಾಲಕ ತನ್ನ ಟ್ರಾಕ್ಟರ್ ನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ನಾನು ಮತ್ತು ಸಲೀಂ ಬೈಕ್ ಸಮೇತ ನೆಲಕ್ಕೆ ಬಿದಿದ್ದುದ್ದು ಸ್ಥಳೀಯರು ಬಂದು ಉಪಚರಿಸಿದ್ದು ನನಗೆ ಕೈ ಕಾಲುಗಳಿಗೆ ಗಾಯಗಳಾಗಿದ್ದು, ಸಲೀಂನ ತಲೆಗೆ , ಮೈ ಕೈ , ಕಾಲುಗಳಿಗೆ ತೀವ್ರ ಸ್ವರೂಪದ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಸದರಿ ವಿಚಾರವಾಗಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ನಿಪಿ-21 ರಂತೆ ಟ್ರಾಕ್ಟರ್ ಚಾಲಕನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ನನ್ನ ಹೇಳಿಕೆಯ ದೂರನ್ನು ನೀಡಿರುತ್ತೇನೆ ದಿಃ 07-08-2021 ರಂದು ಪೊಲೀಸರು ನಾನುತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 10.00 ರಿಂದ 11.00 ರವರೆಗೂ ಚಾಸಾ-5 ಮತ್ತು 6 ರವರ ಸಮಕ್ಷಮ ನಿಪಿ-8 ರಂತೆ ಪಂಚನಾಮೆ ಜರುಗಿಸಿ ನಮ್ಮ ಸಹಿ ಪಡೆದಿರುತ್ತಾರೆ ಸದರಿ ಸಮಯಕ್ಕೆ ನಿಪಿ-9 ರಂತೆ ಪೊಟೋ ತೆಗೆದಿರುತ್ತಾರೆ. ದಿಃ22-09-2021 ರಂದು ಪೊಲೀಸರು ನೀಡಿದ

ನೋಟಿಸಿಗೆ ನಿಪಿ-18 ರಂತೆ ಉತ್ತರವನ್ನು ನೀಡಿ ನಾನು  ದಾಖಲೆಗಳನ್ನು ಹಾಜರುಪಡಿಸಿ ನಿಪಿ-20 ರಂತೆ ಇಂಡಿಮಿನಿಟಿ ಬಾಂಡ್ ನ್ನು ಹಾಜರುಪಡಿಸಿ ಬೈಕ್ ನ್ನು ನನ್ನ ವಶಕ್ಕೆ ಪಡೆದಿರುತ್ತೇನೆ .  ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ  ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರಃ

ಪ್ರಶ್ನೆ-3)ನಿಮ್ಮ ಪರವಾಗಿ  ಸಾಕ್ಷಿಗಳು ಇವೆಯೆ?  ಸಾಕ್ಷಿಗಳು ಇದ್ದರೆ ಹೆಸರು ಹಾಗೂ ವಿಳಾಸ ತಿಳಿಸಿ?

ಉತ್ತರಃ

ಪ್ರಶ್ನೆ-4)  ನೀವು ಹೆಚ್ಚಿ ಗೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ

(ಆರೋಪಿ  ಹೇಳಿಕೆಗಳನ್ನು ಆರೋಪಿ ಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಕೇಳಿ ಅವರು ಕೊಟ್ಟ ಉತ್ತರಗಳನ್ನು ಅವರು ಕೊಟ್ಟಂತೆ ಬರೆದುಕೊಳ್ಳಲಾಗಿರುತ್ತದೆ ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

ಸ್ಥಳಃ ಚನ್ನಗಿರಿ

ದಿನಾಂಕಃ 07-04-2026

**1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್.ಸಿ**
**ನ್ಯಾಯಾಧೀಶರು. ಚನ್ನಗಿರಿ**

**ಆರೋಪಿ  ಸಹಿ:**

**<u>1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ಚನ್ನಗಿರಿ</u>**
**<u>ಸಿ.ಸಿ.ನಂಬರ್ 581/2022</u>**

**ಪಿರ್ಯಾದುದಾರರು : ವಿರುದ್ಧ ಆರೋಪಿ**

| ಪಿರ್ಯಾದುದಾರರು | ಆರೋಪಿ |
|---|---|
| ಚನ್ನಗಿರಿ ಪೊಲೀಸ್ ಠಾಣೆ | ಶ್ರೀನಿವಾಸ ಬಿನ್ ಬನಪ್ಪ<br>ವಯಸ್ಸುಃ 26 ವರ್ಷ,<br>ವಾಸಃ ದೇವರಹಳ್ಳಿ ಗ್ರಾಮ, ಚನ್ನಗಿರಿ<br>ತಾ ದಾವಣಗೆರೆ ಜಿಲ್ಲೆ |

**<u>-:: ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಹೆಚ್ಚುವರಿ ಆರೋಪಿತನ ಹೇಳಿಕೆ ::-</u>**

ಪ್ರಶ್ನೆ-1) ಈ ಪ್ರಕರಣದಲ್ಲಿ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೇಳಿದ್ದೀರಾ? ತಿಳಿಯಿತೇ?

ಉತ್ತರಃ

ಪ್ರಶ್ನೆ-2) ಚಾಸಾ-20 ಮಧು ಪಿ ಬಿ ರವರು ದಿಃ 05-08-2021 ರಂದು ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಪಡೆದು, ತನಿಖೆಯನ್ನು ಮುಂದುವರೆಸಿರುತ್ತೇನೆ.
ಅದೇ ದಿನ ಚನ್ನಗಿರಿಯ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿಮೃತ ಸಲೀಂ ತಂದೆ ನೂರ್ ಅಹಮ್ಮದ್ ರವರ ಶವ ಪಂಚಾನಮೆಯನ್ನು ಚಾಸಾ-2 ಮತ್ತು 3 ರವರಿಗೆ ನೋಟೀಸನ್ನು ಜಾರಿ ಮಾಡಿ ಸದರಿಯವರ ಸಮಕ್ಷಮ ಪಂಚನಾಮೆಯನ್ನು ಮಧ್ಯಾಹ್ನ 12 -5 ನಿಳಿಷದಿಂದ 1-5 ನಿಮಿಷದವರೆಗೂ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ನಿಪಿ-1 ರ ಸಮಯಕ್ಕೆ ಭಾವಚಿತ್ರವನ್ನು ತೆಗೆದಿರುತ್ತೇನೆ. ನಿಪಿ-1 ರ ಸಮಯಕ್ಕೆ ಚಾಸಾ-4 ಮತ್ತು 5 ರವರ ಹೇ ಳಿಕೆಗಳನ್ನು ಪಡೆದಿರುತ್ತೇನೆ. ಅಪಘಾತಪಡಿಸಿದ ಟ್ಯಾಕ್ಟರ್ ನ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಿಸಿರುತ್ತೇನೆ.
ದಿಃ 07-08-2021 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-5 ಮತ್ತು 6 ರವರಿಗೆ ನೋಟೀಸನ್ನು ಜಾರಿ ಮಾಡಿ ಪಚರಾಗಿ ಸಹಕರಿಸಲು ಕೋರಿ ಅವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 10 ರಿಂದ 11 ರವರೆಗೂ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಗೆ ಚಾಸ-1, 5 ಮತ್ತು 6 ರವರ ಸಹಿಗಳನ್ನು ಪಡೆದಿರುತ್ತೇನೆ. ನಿಪಿ-8 ರ ಸಮಯಕ್ಕೆ ಕೃತ್ಯ ನಡೆದ ಸ್ಥಳದ ಭಾವಾ ಚಿತ್ರವನ್ನು ತೆಗೆದು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸದರಿ ನಿಪಿ-10 ಕ್ಕೆ ಚಾಸಾ-5 ಮತ್ತು 6 ರವರ ಸಹಿ ಪಡೆದುಕೊಂಡಿರುತ್ತೇನೆ. ಅದೇ ದಿನ ನಲ್ಲೂರು ಉಪ ಪೊ. ಠಾಣಾ ಆವರಣದಲ್ಲಿ

ಅಪಪಾತಪಡಿಸಿದ ಕೆಎ-17 ಟಿಸಿ 9146 ರ ನೀಲಿ ಬಣ್ಣದ ಸ್ವರಾಜ್ 735 ಅನ್ನು ಹಾಜರುಪಡಿಸಿದ್ದು, ಅದನ್ನು ಚಾಸಾ-5 ಮತ್ತು 6 ರವರ ಸಮಕ್ಷಮ ಮಧ್ಯಾಹ್ನ 11-30 ಗಂಟೆಯಿಂದ 12 ರವರೆಗೂ ಐಎಂವಿ ಪರೀಕ್ಷೆಗಾಗಿ ವಾಹನವನ್ನು ತಡೆ ಹಿಡಿದಿರುತ್ತೇನೆ. ಸದರಿ ದಾಖಲೆಗೆ ಹಾಜರುಪಡಿಸಿದ ಸಿಬ್ಬಂದಿಯ ಸಹಿ ಮತ್ತು ಪಂಚರ ಸಹಿಗಳನ್ನು ಪಡೆದಿರುತ್ತೇನೆ. ನಿಪಿ-11 ರ ಸಮಯಕ್ಕೆ ಭಾವ ಚಿತ್ರವನ್ನು ತೆಗೆದಿರುತ್ತೇನೆ. ಅದೇ ದಿನ ಚಾಸಾ-5 ಮತ್ತು 6 ರವರ ಸಮಕ್ಷಮ ಅಪಘಾತಕ್ಕೀಡಾದ ಕೆಎ-20 ಇಎ 1642 ಕಪ್ಪು ಬಣ್ಣದ ಹೋಡಾ ಶೈನ್ ಮೋಟಾರ್ ಬೈಕನ್ನು ಠಾಣಾ ಸಿಬ್ಬಂದಿ ಹಾಜರುಪಡಿಸಿದ್ದು ಅದನ್ನು 12-10 ರಿಂದ 12-40 ರವರೆಗೂ ಐಎಂವಿ ಪರೀಕ್ಷೆಗಾಗಿ ವಾಹನವನ್ನು ತಡೆ ಹಿಡಿದಿರುತ್ತೇನೆ. ಸದರಿ ದಾಖಲೆಗೆ ಹಾಜರುಪಡಿಸಿದ ಸಿಬ್ಬಂದಿಯ ಸಹಿ ಮತ್ತು ಪಂಚರ ಸಹಿಗಳನ್ನು ಪಡೆದಿರುತ್ತೇನೆ. ನಿಪಿ-13 ರ ಸಮಯಕ್ಕೆ ಒಂದು ಭಾವ ಚಿತ್ರವನ್ನು ತೆಗೆದಿರುತ್ತೇನೆ. ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರಃ

ಪ್ರಶ್ನೆಃ 3 ಚಾಸಾ-20 ರವರು ಮುಂದುವರೆದು ಅದೇ ದಿನ ಚಾಸಾ- 14 ರಿಂದ 16 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-18 ರವರಿಂದ ಭಾ. ಸಾ. ಅ. ಕಲಂ 65(ಬಿ) ರ ಅಡಿ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ದಿಃ 11-08-2021 ರಂದು ಅಪಘಾತ ಉಂಟು ಮಾಡಿದ ಕೆ-17 ಟಿಸಿ 9146/47 ಟ್ರ್ಯಾಕ್ಟರ್ ನ ಆರ್ ಸಿ ಮಾಲೀಕರಿಗೆ ದಂ ಪ್ರ ಸಂ ಕಲದ 133 ರ ಅಡಿ ನೋಟೀಸನ್ನು ಜಾರಿ ಮಾಡಿ ಉತ್ತರವನ್ನು ಪಡೆದಿರುತ್ತೇನೆ ಹಾಗೂ ಅದೇ ದಿನ 3ನೇ ಆರೋಪಿಯಾದ ನೀಲಮ್ಮರವರಿಂದ ತಮ್ಮ ಉತ್ತರವನ್ನು ಪಡೆದಕೊಂಡಿದ್ದು ದಿಃ 05-08-21 ರಂದು ಬೆಳಿಗ್ಗೆ 9 ಗಂಟಗೆ ಸದರಿ ವಾಹವವನು ಮೃತನ ಸಂಬಂಧಿಯಾದ 1ನೇ ಆರೋಪಿ ಚಾಲನೆ ಮಾಡುತ್ತಿದ್ದುದಾಗಿ ಹಾಗೂ ಸದರಿ ವಾಹನಕ್ಕೆ ಆರ್ ಸಿ ಪುಸ್ತಕ ಇದ್ದು ವಿಮೆ ಚಾಲ್ತಿಯಲ್ಲಿರುವುದಿಲ್ಲ ಎಂದು 3ನೇ ಆರೋಪಿಗೆ ಚಾಲನಾ ಪರವಾನಗಿ ಇತ್ತು ಎಂದು ಉತ್ತರಿಸಿರುತ್ತಾರೆ. ನಂತರ 1ನೇ ಆರೋಪಿಯ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆಗೂಳಿಸಿರುತ್ತೇನೆ ಹಾಗೂ ಸದರಿ ವಾಹನವನ್ನು ಠಾಣಾ ಠಾಣಾ ಪಿಎಫ್ ನಂಃ120/21 ರಂತೆ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿಃ22-09-21 ರಂದು ಪ್ರಕರಣದ ತನಿಖೆಯನ್ನು ಮುಂದುವರೆಸಿ ಅಪಘಾತಕ್ಕೀಡಾದ ಕೆಎ-17 ಟಿ ಎ 9146 ರ ವಾಹನದ ಬೈಕಿನ ಮಾಲೀಕನಾದ 2ನೇ ಆರೋಪಿಗೆ ದಂ ಪ್ರ ಸಂ ಕಲಂ 133 ರ ಅಡಿ

ನೋಟೀಸನ್ನು ಜಾರಿ ಮಾಡಿ ಉತ್ತರವನ್ನು ಪಡೆದಿರುತ್ತೇನೆ. ಸದರಿ ಉತ್ತರದಲ್ಲಿ ಸದರಿ ವಾಹನವು ಚಾಸಾ-6 ರವರ ಮಾಲೀಕತ್ವದಲ್ಲಿದ್ದು, ತನಗೆ ವಾಹನವನ್ನು ಬಿಡುಗಡೆಗಾಗಿ ಜಿ ಪಿ ಎ ಅನ್ನು ನೀಡಿರುವುದಾಗಿ ನಮೂದಿಸಿರುತ್ತಾರೆ. ಸದರಿಯವರಿಂದ ಜಿ ಪಿ ಎ ಪಡೆದು, ಇಂಡಿಮ್ನಿಟಿ ಬಾಂಡನ್ನು ಪಡೆದು ಇಂಡೆಮ್ನಿಟಿ ಬಾಂಡನ್ನು ಪಡೆದು ವಾಹನವನ್ನು ಬಿಡುಗಡೆಗೊಳಿಸಿರುತ್ತೇನೆ. ದಿಃ 08-05-2021 ರಂದು ಬೆಳಿಗ್ಗೆ 9 ಗಂಟೆಗೆ 2ನೇ ಆರೋಪಿ ಬೈಕ್ ಚಲಾವಣೆ ಮಾಡುತ್ತಿದ್ದುದ್ದಾಗಿ ತಿಳಿಸಿದು, ವಾಹನದ ಅರ್ ಸಿ ಪುಸ್ತಕ ಮತ್ತು ವಿಮೆ ಚಾಲ್ತಿಯಲ್ಲಿರುವುದಾಗಿ ಮತ್ತು ಚಾಲನಾ ಪರವಾನಗಿ ಇರುವುದಿಲ್ಲವೆಂದು ನಿಪಿ-18 ರಲ್ಲಿ ನಮೂದಿಸಿರುತ್ತಾರೆ. 2ನೇ ಆರೋಪಿಯ ಮೇಲೆ ದಸ್ತಗಿರಿ ಕ್ರಮ ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 07-09-2021 ರಂದು ಅಪಘಾತದಲ್ಲಿ ಭಾಗಿಯಾದ ಚಾಸಾ-7-3ನೇ ಆರೋಪಿ ನ್ಯಾಯಾಲಯದಿಂದ ವಾಹನ ಬಿಡುಗಡೆ ಆದೇಶವನ್ನು ಹಾಜರುಪಡಿಸಿದ್ದರಿಂದ ಪಂಚರಾದ ಚಾಸಾ-9 ಮತ್ತು 10 ರವರ ಸಮಕ್ಷಮ ಚಾಸಾ-7 ರವರಿಗೆ ಸದರಿ ವಾಹನವನ್ನು ಬಿಡುಗಡೆಗೊಳಿಸಿರುತ್ತೇನೆ. ದಿಃ 12-10-2021 ರಂದು ಆರ್ ಟಿ ಓ ಕಛೇರಿಯಿಂದ ಐ ಎಂ ವಿ ವರದಿಯನ್ನು ಸ್ವೀಕರಿಸಿರುತ್ತೇನೆ. ದಿಃ 26-11-2021 ರಂದು ಚನ್ನಗಿರಿಯ ತಾಲ್ಲೂಕು ಆಸ್ಪತ್ರೆಯಿಂದ ಮೃತನ ಪಿ ಎಂ ವರದಿಯನ್ನು ಸ್ವೀಕರಿಸಿರುತ್ತೇನೆ. ದಿಃ 26-12-2021 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ ನಂತರ ತನಿಖೆಯನ್ನು ಮುಕ್ತಾಯಗೊಳಿಸಿ ದೋ. ಪಟ್ಟಿಯನ್ನು ಸಲ್ಲಿಸಿರುತ್ತೇನೆ. 1ನೇ ಆರೋಪಿಯ ಮೇಲೆ ಐಪಿಸಿ ಕಲಂಃ 279, 337, 304(ಎ) ರ ಅಡಿ, 2ನೇ ಆರೋಪಿಯ ಮೇಲೆ ಐ ಎಂ ವಿ ಕಲಂಃ 181 ರ ಅಡಿ, 3ನೇ ಆರೋಪಿ ಮೇಲೆ ಐ ಎಂ ವಿ ಕಲಂಃ 196 ರ ಅಡಿ, ದೋ. ಪಟ್ಟಿಯನ್ನು ಸಲ್ಲಿಸಿರುತ್ತೇನೆ. 2ನೇ ಆರೋಪಿಯು ಪ್ರಸ್ತುತ ಪ್ರಕರಣದ ದೂರುದಾರರಾಗಿರುತ್ತಾರೆ. 3ನೇ ಆರೋಪಿ ಚಾಸಾ-7 ರವರಾಗಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರಃ

ಪ್ರಶ್ನೆಃ 4 ಚಾಸಾ-19 ಎಸ್ ಅರ್ ವೀರಪ್ಪರವರು ತಮ್ಮ ಸಾಕ್ಷ್ಯದಲ್ಲಿ ದಿಃ 05-08-2021 ರಂದು ಬೆಳಿಗ್ಗೆ 10-45 ರ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚನ್ನಗಿರಿ ಸರ್ಕಾರಿ ಆಸ್ಪತ್ರೆಯಿಂದ ಬಂದ ಹೆಚ್ ಎಂ ಆರ್ ಅನ್ನು ಸ್ವೀಕರಿಸಿ, ಆಸ್ಪತ್ರೆಗೆ ಭೇಟಿ ನೀಡಿ, ಚಾಸಾ-1

ರವರು ಕೊಟ್ಟ ಹೇಳಿಕೆಯ ದೂರನ್ನು ಬೆಳಿಗ್ಗೆ 11 ರಿಂದ 11-30 ರವೆಗೂ ಪಡೆದು ಠಾಣೆಗೆ ವಾಪಸ್ಸಾಗಿ 11-45 ಗಂಟೆಗೆ ಠಾಣಾ ಗು ನಂಃ 276/2021 ಕಲಂಃ 279, 337, 304(ಎ) ಐಪಿಸಿ ರೀತ್ಯ ಪ್ರಕರಣವನ್ನು ದಾಖಲಿಸಿರುತ್ತೇನೆ. ಸದರಿ ಪ್ರಕರಣ ಘೋರ ಪ್ರಕರಣವಾದ ಕಾರಣ ಪ್ರಕರಣದ ಕಡತವನ್ನು ಮುಂದಿನ ತನಿಹೆಗಾಗಿ ಚಾಸಾ-20 ರವರಿಗೆ ವಹಿಸಿಕೊಟ್ಟಿರುತ್ತೇನೆ. ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರಃ

ಪ್ರಶ್ನೆಃ 5 ಚಾಸಾ-1 ಮಹಮ್ಮದ್ ಗೌಸ್ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 05-8-2021 ರಂದು ಬೆಳಿಗ್ಗೆ 8.45ರ ಸಮಯಕ್ಕೆ ನನ್ನ ಬಾಬ್ತಾದ ಕೆಎ-20/ಇಎ-1642 ನೇ ಬೈಕಿನಲ್ಲಿ ಬಾರ್ ಬೆಂಡಿಂಗ್ ಕೆಲಸಕ್ಕಾಗಿ ಹಿಂಬದಿ ಸವಾರನಾಗಿ ಸಲೀಂನನ್ನು ಕೂರಿಸಿಕೊಂಡು ಚನ್ನಗಿರಿಯಿಂದ ನಲ್ಲೂರು ಗ್ರಾಮಕ್ಕೆ ಹೋಗುತ್ತಿದ್ದಾಗ ದೋಣಿಹಳ್ಳಿ ಗ್ರಾಮದ ಬಳಿ ಮುದಿಗೆರೆ ಗ್ರಾಮದ ಕಡೆಯಿಂದ ಟ್ರಾಕ್ಟರ್ ಚಾಲಕ ತನ್ನ ಟ್ರಾಕ್ಟರ್ ನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ನಾನು ಮತ್ತು ಸಲೀಂ ಬೈಕ್ ಸಮೇತ ನೆಲಕ್ಕೆ ಬಿದಿದ್ದುದ್ದು ಸ್ಥ್ಥಳೀಯರು ಬಂದು ಉಪಚರಿಸಿದ್ದು ನನಗೆ ಕೈ ಕಾಲುಗಳಿಗೆ ಗಾಯಗಳಾಗಿದ್ದು, ಸಲೀಂನ ತಲೆಗೆ , ಮೈ ಕೈ , ಕಾಲುಗಳಿಗೆ ತೀವ್ರ ಸ್ವರೂಪದ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಸದರಿ ವಿಚಾರವಾಗಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ನಿಪಿ-21 ರಂತೆ ಟ್ರಾಕ್ಟರ್ ಚಾಲಕನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ನನ್ನ ಹೇಳಿಕೆಯ ದೂರನ್ನು ನೀಡಿರುತ್ತೇನೆ ದಿಃ 07-08-2021 ರಂದು ಪೊಲೀಸರು ನಾನುತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 10.00 ರಿಂದ 11.00 ರವರೆಗೂ ಚಾಸಾ-5 ಮತ್ತು 6 ರವರ ಸಮಕ್ಷಮ ನಿಪಿ-8 ರಂತೆ ಪಂಚನಾಮೆ ಜರುಗಿಸಿ ನಮ್ಮ ಸಹಿ ಪಡೆದಿರುತ್ತಾರೆ ಸದರಿ ಸಮಯಕ್ಕೆ ನಿಪಿ-9 ರಂತೆ ಪೊಟೋ ತೆಗೆದಿರುತ್ತಾರೆ. ದಿಃ22-09-2021 ರಂದು ಪೊಲೀಸರು ನೀಡಿದ ನೋಟಿಸಿಗೆ ನಿಪಿ-18 ರಂತೆ ಉತ್ತರವನ್ನು ನೀಡಿ ನಾನು ದಾಖಲೆಗಳನ್ನು ಹಾಜರುಪಡಿಸಿ ನಿಪಿ-20 ರಂತೆ ಇಂಡಿಮಿನಿಟಿ ಬಾಂಡ್ ನ್ನು ಹಾಜರುಪಡಿಸಿ ಬೈಕ್ ನ್ನು ನನ್ನ ವಶಕ್ಕೆ ಪಡೆದಿರುತ್ತೇನೆ . ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರಃ

ಪ್ರಶ್ನೆ-6)ನಿಮ್ಮ ಪರವಾಗಿ  ಸಾಕ್ಷಿಗಳು ಇವೆಯೆ?  ಸಾಕ್ಷಿಗಳು ಇದ್ದರೆ ಹೆಸರು ಹಾಗೂ ವಿಳಾಸ ತಿಳಿಸಿ?

ಉತ್ತರಃ

ಪ್ರಶ್ನೆ-7)  ನೀವು ಹೆಚ್ಚಿ ಗೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ

(ಆರೋಪಿ  ಹೇಳಿಕೆಗಳನ್ನು ಆರೋಪಿ ಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಕೇಳಿ ಅವರು ಕೊಟ್ಟ ಉತ್ತರಗಳನ್ನು ಅವರು ಕೊಟ್ಟಂತೆ ಬರೆದುಕೊಳ್ಳಲಾಗಿರುತ್ತದೆ ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

ಸ್ಥಳಃ ಚನ್ನಗಿರಿ

ದಿನಾಂಕಃ 24-01-2026

**1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್.ಸಿ**
**ನ್ಯಾಯಾಧೀಶರು. ಚನ್ನಗಿರಿ**

**ಆರೋಪಿ  ಸಹಿ:**